ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಕಿ.ಇಂ/ಕ.ದೃಢೀಕರಣ ಪತ್ರ/2023-24/28

ದಿನಾಂಕ: 19/04/2023

ರವರಿಗೆ,

Principal,
Delhi World Public School,
(Delhi World Foundation),
Bluejay sunshine Hills,
Andarahalli Main Road, 8th Mile Junction,
Tippenahalli, Bangalore 560 073.

ಮಾನ್ಯರೆ,

ವಿಷಯ: ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ: 1. ತಮ್ಮ ಮನವಿ ಪತ್ರ ದಿನಾಂಕ: 20.03.2023
2. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Delhi World Public School, (Delhi World Foundation), Bluejay sunshine Hills, Andarahalli Main Road, 8th Mile Junction, Tippenahalli, Bangalore 560 073 ಇಲ್ಲಿನ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತೀರಿ.

ಅದರಂತೆ, Delhi World Public School, (Delhi World Foundation), Bluejay sunshine Hills, Andarahalli Main Road, 8th Mile Junction, Tippenahalli, Bangalore 560 073 ಶಾಲಾ ಕಟ್ಟಡವನ್ನು ದಿನಾಂಕ: 13.04.2023 ರಂದು ಸಂಬಂಧಪಟ್ಟ ಇಂಜನಿಯರ್ ಹಾಗೂ ಶಾಲೆಯ ಆಡಳಿತ ಮಂಡಳಿಯವರಾದ ಶ್ರೀ. ಇಮ್ರಾನ್ ಜಮಾಲ್ ರವರೊಂದಿಗೆ ಶಾಲಾ ಕಟ್ಟಡದ ಒಳಭಾಗ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಸದರಿ ಕಟ್ಟಡವು ನೆಲಮಹಡಿಯೊಂದಿಗೆ ಎರಡು ಮಹಡಿಗಳನ್ನು ಹೊಂದಿದ್ದು, 2018 ರಲ್ಲಿ ನಿರ್ಮಾಣ ಮಾಡಿರುವುದಾಗಿ ಪರಿವೀಕ್ಷಣೆ ಸಮಯದಲ್ಲಿ ತಿಳಿಸಿರುತ್ತೀರಿ. ಕಟ್ಟಡವು ವಿಟ್ರಿಫೈಡ್ ನೆಲಹಾಸು, ಅಲ್ಯೂಮಿನಿಯಂ ಕಿಟಕಿಗಳು ಮತ್ತು ಮರದ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಕಟ್ಟಡದಲ್ಲಿ ನೆಲ ಮತ್ತು ಮೊದಲನೇ ಮಹಡಿಯಲ್ಲಿ 09 ಕ್ಲಾಸ್ ರೂಂ ನೊಂದಿಗೆ ಶೌಚಾಲಯ ಮತ್ತು ಎರಡನೇ ಮಹಡಿಯಲ್ಲಿ 13 ಕ್ಲಾಸ್ ರೂಂ ನೊಂದಿಗೆ ಶೌಚಾಲಯಗಳನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ.

ಕಟ್ಟಡಕ್ಕೆ ಸಂಬಂಧಪಟ್ಟ ಕಾಂಕ್ರೀಟ್ ಗ್ರೇಡ್, ಸ್ಟೀಲ್, ಸಿಮೆಂಟ್, ಮರಳು ಇತ್ಯಾದಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಳವಡಿಸುವ ಸಾಮಾಗ್ರಿಗಳ ಪರೀಕ್ಷೆ ವರದಿಗಳು ಇಲ್ಲದಿರುವ ಕಾರಣದಿಂದ ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರಡು ರೀತಿಯ Non Destructive test ಗಳನ್ನು ಕೈಗೊಂಡಿರುವ ವರದಿಗಳನ್ನು ಮನವಿ ಪತ್ರದೊಂದಿಗೆ ಲಗತ್ತಿಸಿ ನೀಡಿರುತ್ತೀರಿ.

ಮುಂದುವರೆದು, Bangalore University Department of Civil Engineering (U.V.C.E) ರವರಿಂದ Form for certificate for Structural Design Sufficiency Report (Annex –C Clause 12.2.8), Ultrasonic pulse velocity test report ಮತ್ತು Rebound Hammer Test ಗಳನ್ನು ಯು.ವಿ.ಸಿ.ಇ. ಬೆಂಗಳೂರು ವಿಶ್ವವಿದ್ಯಾಲಯ, ಸಿವಿಲ್ ಇಂಜನಿಯರ್

ವಿಭಾಗದ Professor Dr. N. Jayaramappa, B.E (Civil), ME(Str), Ph.D. ರವರಿಂದ ಪರೀಕ್ಷಿಸಿದ ಪರೀಕ್ಷಾ ವರದಿಯಲ್ಲಿ ಸದರಿ ಕಟ್ಟಡವು **Safe for occupancy** as per Natinal Building Code of India-2016 guidelines and available standard code of parctise. ಎಂದು ದೃಢೀಕರಿಸಿರುತ್ತಾರೆ.

**ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತೀರಿ.**

1. Sanction Plan
2. Tax paid Certificate
3. As built Drawing
4. Certificate fro structural design sufficiency (Annexe –C)
5. Ultrasonic Pulse Velocity Test Report
6. Rebound Hammer Test result.

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ / ಕಾಲೇಜಿಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR0423005901449723 dtd. 17.04.2023 ರಲ್ಲಿ ರೂ. 5,000.00 ಗಳನ್ನು ಪಾವತಿಸಿರುತ್ತಾರೆ.

ಸದರಿ ವಿದ್ಯಾಸಂಸ್ಥೆಯ ಕಟ್ಟಡದ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಆದರೆ, ಕಟ್ಟಡದ ನೆಲಮಹಡಿಯ ಕೊಠಡಿಗಳ ಮೇಲ್ಚಾವಣಿಯಲ್ಲಿ ಕಂಡುಬಂದಿರುವ Dampness ಗಳಿಗೆ ನಿಖರ ಕಾರಣಗಳನ್ನು ಕಂಡುಹಿಡಿದು ಸರಿಪಡಿಸುವುದು ಹಾಗೂ ಮೇಲ್ಚಾವಣಿಯಲ್ಲಿನ ಜಲನಿರೋಧಕ ಪದರವನ್ನು ಸಂಪೂರ್ಣವಾಗಿ ಪುನರ್ ನಿರ್ಮಾಣ ಮಾಡಲು ತಕ್ಷಣವೇ ಕ್ರಮ ಕೈಗೊಳ್ಳುವುದು ಮತ್ತು ಕಟ್ಟಡದ ನಿರ್ವಹಣೆ ಮಾಡುವ ಜವಬ್ದಾರಿಯು ಸದರಿ ಶಾಲೆಯವರದಾಗಿರುತ್ತದೆ ಹಾಗೂ ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಆದ್ದರಿಂದ ಸದರಿ ಪ್ರಮಾಣ ಪತ್ರವನ್ನು Delhi World Public School, (Delhi World Foundation), Bluejay sunshine Hills, Andarahalli Main Road, 8th Mile Junction, Tippenahalli, Bangalore 560 073 ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.4 ಕಟ್ಟಡಗಳ ಉಪವಿಭಾಗ,
ಬೆಂಗಳೂರು.